ಶ್ರೀ ಬಿ. ಬಸವಲಿಂಗಪ್ಪ.—ಇದನ್ನು ಅತೀ ಜಾಗ್ರತೆಯಾಗಿ ಮುಗಿಸುತ್ತೇವೆ. ಹೌಸಿಂಗ್ ಬೋರ್ಡಿನವರು ಕ್ರಮ ತೆಗೆದುಕೊಂಡು ಅದನ್ನು ಮುಗಿಸಬೇಕಾಗಿತ್ತು. ಈಗ ಹೊಸ ಕಂಟ್ರಾಕ್ಟರ್ ಬಂದಿದ್ದಾರೆ. ಅವರಿಗೆ ಆದಷ್ಟು ಜಾಗ್ರತೆಯಾಗಿ ಮುಗಿಸುವುದಕ್ಕೆ ಆದೇಶವನ್ನು ಕಳುಹಿಸುತ್ತೇವೆ.

ಶ್ರೀ ಎಂ ಎಚ್. ಜಯಪ್ರಕಾಶ್‌ನಾರಾಯಣ.—ನಿರ್ಣಯ ಇಸವಿಯಲ್ಲಿ ಕೊಟ್ಟ ಕಂಟ್ರಾಕ್ಟ್ ಕೆಲಸ ಇನ್ನೂ ಮುಗಿದಿಲ್ಲ ಆದ್ದರಿಂದ ಈಗಲಾದರೂ ಇವರು ಈ ಕೆಲಸವನ್ನು ಪೂರೈಸುವುದಕ್ಕೆ ಒಂದು ನಿಗದಿಯಾದ ಕಾಲವನ್ನು ಗೊತ್ತು ಮಾಡಿ ಕೊಡುತ್ತೀರಾ ?

ಶ್ರೀ ಬಿ. ಬಸವಲಿಂಗಪ್ಪ.—ಅದನ್ನು ನಿಗದಿ ಮಾಡಿ ಕೊಡುತ್ತೇವೆ.

ಶ್ರೀ ವಿ ಎಂ. ಫಾಡಿ.—೧೦ ಕಟ್ಟಡಗಳಿಗೆ ಒಂದು ಲಕ್ಷದ ೭೪ ಸಾವಿರದ ೪೦೦ ರೂಪಾಯಿ ಎಸ್ಟಿಮೇಟ್ ಆಗಿದೆ ಎಂದು ಹೇಳಿದ್ದೀರಿ. ಇದರಲ್ಲಿ ಈಗಾಗಲೇ ಎಷ್ಟು ಹಣ ಖರ್ಚಾಗಿದೆ ?

ಶ್ರೀ ಬಿ. ಬಸವಲಿಂಗಪ್ಪ.—ಆ ಒಂದು ವಿಚಾರ ಇಲ್ಲಿ ಒದಗಿಸಿರತಕ್ಕಂತಹ ಉತ್ತರದಲ್ಲಿ ಇಲ್ಲ.

DISPARITY IN WAGES OF WORKERS OF COTTON MILLS

157. SRI SRIRAMULU (Gandhinagar).—Will the Minister for Labour be pleased to state :—

(*a*) whether the workers of all the cotton mills in the State are getting equal pay for equal work;

(*b*) the steps taken by the Government to rectify the disparity if any, in wages ?

SRI AZEEZ SAIT (Minister for Labour).—

(*a*) No.

(*b*) Efforts are being made to persuade the Management to rectify the disparity in wages by implementing the recommendations of Wage Board. As the purpose is not fulfilled the Government intends to appoint a Cotton Mills Settlement Committee in respect of wages.

ಶ್ರೀ ಕೆ. ಶ್ರೀರಾಮುಲು.—ಒಂದೇ ತರನಾದ ಕೆಲಸಕ್ಕೆ ಒಂದೇ ರೀತಿಯ ವೇತನವನ್ನು ಕೊಡುತ್ತೀರಾ ಎಂದು ಕೇಳಿದ್ದಕ್ಕೆ ಇಲ್ಲವೆಂದು ಹೇಳಿದ್ದೀರಿ. ಅಂದರೆ ತಾವು ಮಂತ್ರಿಯಾಗುವ ಮೊದಲು ಇಲ್ಲವೆಂದು ಗೊತ್ತಾದದ್ದೇ ಅಥವಾ ಮಂತ್ರಿಯಾದ ಮೇಲೆ ಗೊತ್ತಾಯಿತೇ ?

† ಶ್ರೀ ಅಜೀಜ್ ಸೇಟ್.—ಇದಕ್ಕೆ ನಾನು ಏನು ಉತ್ತರ ಹೇಳಬೇಕೋ ನನಗೆ ಗೊತ್ತಾಗುವುದಿಲ್ಲ.

ಶ್ರೀ ಕೆ. ಶ್ರೀರಾಮುಲು.—ಉತ್ತರದಲ್ಲಿ ಮನ ಒಲಿಸಲು ಪ್ರಯತ್ನಿಸಲಾಗುತ್ತಿದೆ ಎಂದು ಹೇಳಿದ್ದಾರೆ, ಇದರ ಬಗ್ಗೆ ಹೆಚ್ಚು ವಿವರಣೆ ತಿಳಿಯಲು ಅಪೇಕ್ಷಿಸುತ್ತೇನೆ.

ಶ್ರೀ ಅಜೀಜ್ ಸೇಟ್.—ವೇಜಸ್ ಬೋರ್ಡುಗಳ ಶಿಫಾರಸುಗಳನ್ನು ಇಂಪ್ಲಿಮೆಂಟ್ ಮಾಡಲು ನಮ್ಮ ಇಲಾಖೆಯವರು ಪರ್‌ಸುಯೇಷನ್ ಮಾಡುತ್ತಿದ್ದಾರೆ ಹಾಗಿದ್ದರೂ ಇವರ ಫಲ ಬರಲಿಲ್ಲವಾದುದರಿಂದ ಸ್ಪೆಷಲ್ ಕಂಪಲ್ಸರಿ ಅಡ್ಜುಡಿಕೇಷನ್ ಕಮಿಟಿ ಫಾರ್ ಆಲ್ ಟೆಕ್ಸ್‌ಟೈಲ್ ಮಿಲ್ಸ್ ಎನ್ನುವುದನ್ನು ಮಾಡಲು ತೀರ್ಮಾನ ಕೈಗೊಂಡಿದ್ದೇವೆ.

ಶ್ರೀ ಬಿ. ವಿ. ಕಕ್ಕೇರಿಯವರು.—ದಾವಣಗೆರೆ ಹಾಗೂ ಇನ್ನಿತರ ಕಡೆ ಇರುವ ಮಿಲ್ಸ್‌ಗಳಲ್ಲಿ ಇದುವರೆಗೆ ವೇಜ್ ಬೋರ್ಡುಗಳ ತೀರ್ಮಾನದಂತೆ ಜಾರಿಗೆ ಕೊಡದೇ ಇರುವುದು ತಮ್ಮ ಗಮನಕ್ಕೆ ಬಂದಿದೆಯೇ ? ಇದರ ಪರಿಣಾಮವಾಗಿ ಕೆಲವು ಕಡೆಗಳಲ್ಲಿ ಸರಿಯಾದ ವೇತನಗಳನ್ನು ಕೊಡದಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಅಜೀಜ್ ಸೇಟ್ .—ಚೆಕ್‌ಸ್ಟೈಲ್ ಮಿಲ್ಲಿಂಗಳು ಮೈಸೂರು ಕೈಟಿನಲ್ಲಿರುವ ವೇಜ್ ಬೋರ್ಡ್ ತಿಳಿಸಿರುವಂತೆ ಬೇಸಿಕ್ ಪೇ ಹಾಗೂ ಡಿ ಎ ಇತ್ಯಾದಿಗಳನ್ನು ಕೊಡಲು ರೆಕಮೆಂಡೇಷನ್‌ಗಳನ್ನು ಕಳುಹಿಸಿದ್ದರೂ ಆದರಂತೆ ಇದುವರೆಗೆ ಇಂಪ್ಲಿಮೆಂಟ್ ಮಾಡಿಲ್ಲ. ವೇಜ್ ಬೋರ್ಡಿನವರು ಸ್ಕಿಲ್ಡ್ ಸೆಮಿ ಸ್ಕಿಲ್ಡ್ ಇವರ ಪೇ ಹೇಗಿರ ಬೇಕೂಎಂದು ತಿಳಿಸಿದೆ, ಇದೇ ರೀತಿ ಇತರ ವೇತಗಳನ್ನೂ ತಿಳಿಸಿದೆ. ಇದರಲ್ಲಿ ಬಹು ವಿಧವಾದ ವ್ಯತ್ಯಾಸಗಳು ಇರುವುದರಿಂದ ಇವನ್ನೆಲ್ಲಾ ಸೂಕ್ತ ರೀತಿಯಲ್ಲಿ ಸರಿಪಡಿಸಲು ಸಹಾಯವಾಗುವಂತೆ ಸರಕಾರ ಈಗ ಸ್ಟಾಂಡರ್‌ಡೈಸೇಷನ್ ಕಮಿಟಿ ಎಂದು ಮಾಡಬೇಕೆಂದು ತೀರ್ಮಾನ ಮಾಡಿ ಇದರ ಮೂಲಕ ಎಲ್ಲರಿಗೂ ಅನುಕೂಲವಾಗುವಂತೆ ಮಾಡಬೇಕೆಂದು ಇದ್ದೇವೆ.

ಶ್ರೀ ಕೆ. ಶ್ರೀರಾಮುಲು.—ಮದ್ರಾಸು, ಬೊಂಬಾಯಿ, ಅಹಮ್ಮದಾಬಾದು ಹಾಗೂ ಕಾನ್ಪುರ ಇಲ್ಲೆಲ್ಲಾ ಸ್ಟಾಂಡರ್ಡ್ ವೇಜಸ್‌ಗಳನ್ನು ಕೊಡಬೇಕೆಂದು ತೀರ್ಮಾನವಾಗಿದೆ. ಇದೇ ರೀತಿ ನಮ್ಮ ರಾಜ್ಯ ದಲ್ಲೂ ತಂದರೆ ಇಲ್ಲಿ ತಾವು ಹೇಳುವಂತೆ ಮಾಡುವ ಕಮಿಟಿ ಅನಗತ್ಯವಲ್ಲವೇ ?

ಶ್ರೀ ಅಜೀಜ್ ಸೇಟ್.—ವೇಜ್ ಬೋರ್ಡುಗಳು ಮಾಡುವುದು ಬರೀ ರೆಕಮೆಂಡೇಷನ್‌ಗಳು. ಇದು ಮಾನ್ಯ ಸದಸ್ಯರಿಗೂ ಗೊತ್ತಿರುವ ವಿಷಯ. ಇದರಂತೆ ಇಂಪ್ಲಿಮೆಂಟು ಮಾಡಲು ಮಿಲ್‌ನವರು ಒಪ್ಪದೆ ಇದ್ದುದರಿಂದ ನಮ್ಮ ಇಲಾಖೆಯವರು ಅವರಿಗೆಲ್ಲ ಹೇಳಿ ಒಪ್ಪುವಂತೆ ಮಾಡುವ ಪ್ರಯತ್ನಗಳನ್ನು ಮಾಡಿದರೂ ಅನುಕೂಲವಾಗಲಿಲ್ಲ. ಇದಕ್ಕಾಗಿ ಸರಕಾರವೇ ಇರುವ ವ್ಯತ್ಯಾಸಗಳನ್ನು ಸರಿಪಡಿಸಲು ಅನುಕೂಲವಾಗಲಿ ಎಂದು ಸ್ಟಾಂಡರ್‌ಡೈಸೇಷನ್ ಕಮಿಟಿ ಎಂದು ಮಾಡುತ್ತಿದ್ದೇವೆ. ಇದನ್ನು ಯಾವ ಕಾರ್ಮಿಕ ನಾಯಕರೂ ಮಾಡಬೇಕೆಂದು ಹೇಳಲಿಲ್ಲ ಸರಕಾರವೇ ತಾನೇ ತಾನಾಗಿ ಇರುವ ಡಿಸ್‌ಪ್ಯಾರಿಟಿ ಗಳನ್ನು ಕಡಿಮೆ ಮಾಡಲು ಇಂತಹ ಒಂದು ಕಮಿಟಿ ಮಾಡಬೇಕೆಂದು ಇದೆ.

ಶ್ರೀ ಕೆ. ಶ್ರೀರಾಮುಲು.—ನನ್ನ ಪ್ರಶ್ನೆಯನ್ನು ಮಾನ್ಯ ಸಚಿವರು ಸರಿಯಾಗಿ ತಿಳಿದುಕೊಳ್ಳಲಿಲ್ಲ, ಬೊಂಬಾಯಿ, ಕಾನ್‌ಪುರ, ಅಹಮ್ಮದಾಬಾದು ಹಾಗೂ ಮದ್ರಾಸು ಪ್ರಾಂತಗಳಲ್ಲಿ ಇಲ್ಲಿರುವ ಟೆಕ್ನಿಕಲ್ ಎಕ್ಸ್‌ಪರ್ಟುಗಳು ಇಲ್ಲಿ ವೇತನಗಳು ಇವ್ಕೇ ಇರಬೇಕು ಎಂದು ಈಗಾಗಲೇ ತೀರ್ಮಾನ ಮಾಡಿರತಕ್ಕ ವಿಷಯ. ಇಲ್ಲಿ ವೇಜ್ ಬೋರ್ಡುಗಳಲ್ಲಿನ ಟೆಕ್ನಿಕಲ್ ಎಕ್ಸ್‌ಪರ್ಟುಗಳು ಮಾಡಿರತಕ್ಕ ಶಿಫಾರಸುಗಳನ್ನು ಕಾನೂನು ಬದ್ಧವಾಗಿ ಮಾಡಲು ಸರಕಾರ ಪ್ರಯತ್ನ ಮಾಡುವುದೇ ಎಂದು ನಾನು ಕೇಳುವುದು. ಇದರ ಬಗ್ಗೆ ಕಾರ್ಮಿಕ ನಾಯಕರೂ ಹಾಗೂ ಇಂಟಕ್ ಸಭೆಯಲ್ಲಿ ಚರ್ಚೆಯಾಗಿ ಮಾನ್ಯ ಮಂತ್ರಿಗಳ ಗಮನಕ್ಕೆ ಕೂಡ ತರಲಾಗಿದೆ, ಹೀಗಿರುವಾಗ ಇಲ್ಲಿ ಸಚಿವರು ನಮ್ಮ ಮೇಲೆ ಹೀಗೆ ಮಾತನಾಡಬಾರದು.

ಶ್ರೀ ಅಜೀಜ್ ಸೇಟ್.—ನಾನು ಹೇಳುತ್ತಿರುವುದು ಸ್ಟಾಂಡರ್‌ಡೈಸೇಷನ್ ಕಮಿಟಿ ಎಂದು ಪ್ರಾರಂಭ ಮಾಡಬೇಕೆಂದು ಇದೆ. ಇದರ ರಿಪೋರ್ಟು ಬಂದ ನಂತರ ಯಾವ ರೀತಿ ಮಾಡಬಹುದು ಅದನ್ನು ವಿಚಾರ ಮಾಡೋಣ.

ಅಧ್ಯಕ್ಷರು.—ಇಲ್ಲಿಗೆ ಪ್ರಶ್ನೋತ್ತರ ವೇಳೆಯಾಯಿತು.

QUESTIONS FOR ANSWERS ON THE DAY (BUT NOT TAKEN UP)

LOANS TO N.G.O's FOR HOUSE BUILDING/PURCHASE/REPAIRS

107. Sri R.S. Patil (Ramadurga).—

Will the Minister for Public Works and Electricity be pleased to state.—

(a) the amount placed at the disposal of the Chief Engineer, (C. and B.) and the Chief Engineer, Irrigation and Public Health during the years 1971-72 and 1972-73, for advancing loans to the N.G.Os. for House Building, House Purchase and House repairs ;